ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-65

ಮೈಲಪ್ಪನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 09.01.15

ಈ ವಾರದ ಮುನ್ಸೂಚನೆ (10-01-15 to 14.01.15 ವರೆಗೆ)

ನಿಯತಾಂಕಗಳು	10.01.15	11.01.15	12.01.15	13.01.15	14.01.15
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	28	27	27	27	27
ಕನಿಷ್ಠ ಉಷ್ಣಾಂಶ (ಡಿ.ಸೆ.)	17	17	18	17	18
ಮೋಡ (ಪ್ರಮಾಣ)	1	2	1	2	2
ಅರ್ದ್ರತೆ ೭.೨೦ ಬೆ (ಶೇ)	73	72	76	80	79
ಅರ್ದ್ರತೆ ೨.೨೦ ಮ (ಶೇ)	43	47	51	50	52
ಗಾಳಿಯ ವೇಗ (ಕಿ.ಮಿ/ಗಂಟೆಗೆ)	3	4	4	5	4
ಗಾಳಿಯ ದಿಕ್ಕು (ಡಿಗ್ರಿ)	100	100	115	115	115

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಒಣಹವೆ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶವು 27.0-28.0°C ಮತ್ತು ಕನಿಷ್ಠ 17-18°C ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 72-80% ಇದ್ದು, ಮಧ್ಯಾಹ್ನ 43-52% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 3-5 ಕಿ.ಮೀ.ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- **ರಾಗಿ:** ಕಟಾವನ್ನು ಮಾಡಬಹುದು, ಚೆನ್ನಾಗಿ ಒಣಗಿಸಿದ ಮೇಲೆ ಗೋಣಿ ಚೀಲದಲ್ಲಿ ಶೇಖರಿಸಬೇಕು.
- ಹಣ್ಣಿನ ಮರಗಳ ತೋಟದಲ್ಲಿ (ಮಾವು, ಸೀಬೆ) ನೆಲಕ್ಕೆ ತಾಕುವ ರೆಂಬೆ ಕೊಂಬೆಗಳನ್ನು ಕತ್ತರಿಸಿ ಕೀಟ ರೋಗಗಳಿಂದ ರಕ್ಷಿಸುವುದು.

ಜನವರಿ ತಿಂಗಳಲ್ಲಿ ಬೆಳೆಯಬಹುದಾದ ಬೆಳೆ ಹಾಗೂ ತಳಿಗಳು:

ಸೂರ್ಯಕಾಂತಿ: ಮಾರ್ಡೆನ್, ಹೈಬ್ರಿಡ್ ತಳಿಗಳು: ಕೆ.ಬಿ.ಎಸ್.ಹೆಚ್-೧,೪೧, ೪೨,೪೪.

ಶೇಂಗಾ: ಐ.ಸಿ.ಜಿ.ಎಸ್-೧೧, ಕೆ-೧೩೪, ಜಿ.ಪಿ.ಬಿ.ಡಿ-೪, ಚಿಂತಾಮಣಿ-೨ (ಕೆ.ಸಿ.ಹೆಚ್-೨).

ರಾಗಿ: ಇಂಡಾಫ್-೫ ಜಿ.ಪಿ.ಯು-೨೬, ಜಿ.ಪಿ.ಯು-೪೮,

ಪಾಪ್‌ಕಾರ್ನ್: ಅಂಬರ್. **ಅಲಸಂದೆ**: ಸಿ-೧೫೨, ಪಿ.ಕೆ.ಬಿ.-೪ (ತರಕಾರಿಗಾಗಿ)

ಸಸ್ಯ ಸಂರಕ್ಷಣೆ:

ಒಣ ಹವೆ ಇರುವುದರಿಂದ ಬೂದಿ ರೋಗ ಹರಡುವ ಸಾಧ್ಯತೆ ಇದೆ. ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು. ಮಾವಿನ ಬೆಳೆಯಲ್ಲಿ ಬೂದು ರೋಗ ಕಂಡುಬಂದರೆ, ಸಲ್ಫೆಕ್ಸ್ ಅಥವಾ ಮೈಕ್ಲೊಬ್ಯುಟನಾಲ್ ಅನ್ನು ಬಿಸಿಲು ಕಡಿಮೆ ಇರುವ ಸಮಯದಲ್ಲಿ ಸಿಂಪಡಣೆ ಮಾಡಬೇಕು. ಆಲೂಗಡ್ಡೆ: ಕೊನೆ ಅಂಗಮಾರಿ ರೋಗ ತೀವ್ರವಾಗಿ ಕಂಡುಬಂದರೆ ಸೈಮೊಕ್ಸಾನಿಲ್+ಮ್ಯಾಂಕೊಜೆಬ್ ಅಥವಾ ರಿಡೊಮಿಲ್ ಗೋಲ್ಡ್ (೨ ಗ್ರಾಂ ಪ್ರತಿ ಲೀಟರ್ ನೀರಿಗೆ) ಅನ್ನು ಸಿಂಪಡಿಸಿ.

ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು